ನಿನಗೆ ನೀನೇ ಬೆಳಕು

# ವಿಜಯ ಕಾಲ

ಪ್ರಧಾನ ಸಂಪಾದಕ: ಕೆ. ದೀಪಕ್

ಓದುಗರ ಒಡಲಾಳ

ಬೆಳಗಿನ ಕನ್ನಡ ದಿನಪತ್ರಿಕೆ

ಮೈಸೂರು | ಚಾಮರಾಜನಗರ | ಮಂಡ್ಯ | ಬೆಂಗಳೂರು

RNI:KARKAN/2017/74098 ಸಂಪುಟ: 08 ಸಂಚಿಕೆ: 01 ಶನಿವಾರ 01 ನವೆಂಬರ್ 2025 ದೂರವಾಣಿ – 9741511340 – 8123436767 ಪುಟ–12 ರೂ. 4

ನಾಡಿನ ಸಮಸ್ತ ಜನತೆಗೆ ಹಾಗೂ ನಮ್ಮ ಆತ್ಮೀಯ ಓದುಗರಿಗೆ **ಕನ್ನಡ ರಾಜ್ಯೋತ್ಸವದ ಶುಭಾಶಯಗಳು**

- ಪ್ರ. ಸಂ.

# ವಿಜಯ ಕಾಲ ಆರಂಭ

## ಇಂದು ಪತ್ರಿಕೆ, ಡಿಜಿಟಲ್ ಮಾಧ್ಯಮ, ಕಚೇರಿ ಉದ್ಘಾಟನೆ







**ಮೈಸೂರು:** ಪಾರಂಪರಿಕ ಮತ್ತು ಚಾರಿತ್ರಿಕ ನಗರಿ ಮೈಸೂರಿನ ಪತ್ರಿಕಾ ಪ್ರಪಂಚಕ್ಕೆ ವಿಜಯಕಾಲ ದಿನಪತ್ರಿಕೆ ಸೇರ್ಪಡೆಗೊಳ್ಳಲು ಕ್ಷಣಗಣನೆ ಆರಂಭಗೊಂಡಿದೆ.

ಹಿರಿಯ ಪತ್ರಕರ್ತ ಕೆ.ದೀಪಕ್ ಸಾರಥ್ಯದಲ್ಲಿ ಪ್ರಕಟಗೊಳ್ಳಲಿರುವ ಪತ್ರಿಕೆಯನ್ನು ರಾಜ್ಯ ವಿಧಾನಸಭಾದ ಸಭಾಪತಿ ಯು.ಟಿ. ಖಾದರ್ ಲೋಕಾರ್ಪಣೆ ಮಾಡಲಿದ್ದಾರೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ವೇದಿಕೆ ಕಾರ್ಯಕ್ರಮದಲ್ಲಿ ಕ್ಷಣಕ್ಷಣಕ್ಕೂ ಸುದ್ದಿ ಪ್ರಸಾರ ಮಾಡುವ ಉದ್ದೇಶದಿಂದ ರಚಿಸಲಾಗಿರುವ ವಿಜಯಕಾಲ ವೆಬ್‌ಸೈಟ್ ಅನ್ನು ಬಹು ಭಾಷಾ ನಟ ಪ್ರಕಾಶ್ ರಾಜ್ ಅವರು ಅನಾವರಣಗೊಳಿಸಲಿದ್ದು, ಡಿಜಿಟಲ್ ಮಾಧ್ಯಮದ ಲಾಂಛನವನ್ನು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಬಿಡುಗಡೆ ಮಾಡಲಿದ್ದಾರೆ.

ನಗರದ ಮೈಸೂರು ವಿಶ್ವ ವಿದ್ಯಾನಿಲಯದ ಆವರಣದಲ್ಲಿರುವ ವಿಜ್ಞಾನ ಭವನದ ಸಭಾಂಗಣದಲ್ಲಿ ಇಂದು (ಶನಿವಾರ) ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ಜರುಗಲಿದ್ದು ಮುಖ್ಯ ಅತಿಥಿಗಳಾಗಿ ಜಿ.ಟಿ. ದೇವೇಗೌಡ, ಹಿರಿಯ ಶಾಸಕ ತನ್ವೀರ್ ಸೇಠ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರನಾಥ್, ಶಾಸಕರಾದ ಕೆ. ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಭಾಗವಹಿಸಲಿದ್ದಾರೆ.

ಇದೇ ವೇಳೆ ವಿಧಾನ ಪರಿಷತ್ ಸದಸ್ಯರಾಗಿ ನಾಮಕರಣಗೊಂಡ ಪತ್ರಕರ್ತ ಡಾ. ಕೆ.ಶಿವಕುಮಾರ್, ಹಿರಿಯ ಪತ್ರಕರ್ತ ಡಿ. ಮಹಾದೇವಪ್ಪ ಹಾಗೂ ತುಮಕೂರಿನ ಹಿರಿಯ ಪತ್ರಕರ್ತರಾದ ಪಿ.ಎನ್. ನೃಪತುಂಗ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಗುವುದು.

**ಸಂಸದರಿಂದ ಕಚೇರಿ ಉದ್ಘಾಟನೆ:** ಮೈಸೂರು ನಗರದ ವಿವಿ ಮೊಹಲ್ಲಾದಲ್ಲಿರುವ ವಿಜಯಕಾಲ ದಿನಪತ್ರಿಕೆಯ ಸುಸಜ್ಜಿತ ಕಚೇರಿಯನ್ನು ಮೈಸೂರು–ಕೊಡಗು ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಂಜೆ 5 ಗಂಟೆಗೆ ಉದ್ಘಾಟಿಸಲಿದ್ದಾರೆ.

ಇವರೊಂದಿಗೆ ಶಾಸಕರಾದ ಟಿ.ಎಸ್. ಶ್ರೀವತ್ಸ, ಅನಿಲ್ ಚಿಕ್ಕಮಾದು, ಡಿ. ರವಿಶಂಕರ್, ಜಿ.ಡಿ. ಹರೀಶ್‌ಗೌಡ, ಮಾಜಿ ಶಾಸಕ ಸಾ.ರಾ. ಮಹೇಶ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ, ಉದ್ಯಮಿ ಹೆಚ್.ಎನ್. ವಿಜಯ್, ಹಿರಿಯ ಪತ್ರಕರ್ತ ಎನ್. ರವಿಕುಮಾರ್ ಟೆಲೆಕ್ಸ್, ಕೆಮ್ಮುಗಿಲು ದಿನಪತ್ರಿಕೆಯ ಸಂಪಾದಕ ಸೋಮಶೇಖರ್ ಕೆರಗೋಡು ಸೇರಿದಂತೆ ವಿವಿಧ ರಾಜಕೀಯ ಪಕ್ಷದ ಮುಖಂಡರು, ಹೋರಾಟಗಾರರು, ಪತ್ರಕರ್ತರು ಭಾಗಹಿಸಲಿದ್ದಾರೆ.


### ಕನ್ನಡ ರಾಜ್ಯೋತ್ಸವ ವಿಶೇಷಾಂಕ ಸಂಚಿಕೆ

ಕನ್ನಡ ರಾಜ್ಯೋತ್ಸವದ ದಿನದಂದೇ ವಿಜಯ ಕಾಲದ ಚಕ್ರ ತಿರುಗಲಾರಂಭಿಸಿದ್ದು ಕನ್ನಡ ನಾಡು, ನುಡಿ, ಸಂಸ್ಕೃತಿಯನ್ನು ಬಿಂಬಿಸುವ ವಿಶೇಷಾಂಕವನ್ನು ಹೊರತರುತ್ತಿರುವುದು ಮೊದಲ ಸಂಚಿಕೆಯ ವಿಶೇಷ ಎಂದು **ವಿಜಯಕಾಲ** ಪತ್ರಿಕೆಯ ಮಾತೃ ಸಂಸ್ಥೆ ಪ್ರಜಾಭಾರತ ಮೀಡಿಯಾ ಹೌಸ್‌ನ ಸಂಸ್ಥಾಪಕಿ ಹಾಗೂ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಕೆ.ಆರ್. ವಿಭಾವಸು ತಿಳಿಸಿದ್ದಾರೆ.

## ಮೂರು ಕಡೆ ವ್ಯಾಘ್ರ ದಾಳಿ: ಇಬ್ಬರು ಬಲಿ

**ಸರಗೂರು:** ತಾಲ್ಲೂಕಿನ ಬೆಣ್ಣೆಗೆರೆ ಗ್ರಾಮದಲ್ಲಿ ಹುಲಿ ದಾಳಿಯಿಂದ ರೈತನೊಬ್ಬ ಸಾವನ್ನಪ್ಪಿದ್ದ ಕಹಿ ಘಟನೆ ನೆನಪಿನಿಂದ ಜಾರುವ ಮುನ್ನವೇ ಮತ್ತೊಬ್ಬ ರೈತನ ಮೇಲೆ ಹುಲಿ ದಾಳಿ ಮಾಡಿ ಕೊಂದಿದೆ.

ತಾಲ್ಲೂಕಿನ ಕುರ್ಣೆಗಾಲ ಬಳಿಯ ಕಾಡಂಚಿನ ಜಮೀನಿನಲ್ಲಿ ಹಸು ಮೇಯಿಸುತ್ತಿದ್ದ ನಿಂಗಯ್ಯ (65) ಎನ್ನುವ ವ್ಯಕ್ತಿ ಮೇಲೆ ಹುಲಿ ದಾಳಿ ಮಾಡಿದೆ. ದಾಳಿಯಿಂದ ವ್ಯಕ್ತಿ ಮೃತಪಟ್ಟಿದ್ದು, ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿದ್ದಾರೆ.



ಸರಗೂರು ತಾಲೂಕಿನ ಬೆಣ್ಣೆಗೆರೆ ಗ್ರಾಮದಲ್ಲಿ ಹುಲಿ ದಾಳಿಯಿಂದ ರೈತ ರಾಜಶೇಖರ್ ಅವರು ಇತ್ತೀಚೆಗಷ್ಟೇ ಮೃತಪಟ್ಟಿದ್ದರು. ಈ ಘಟನೆಗೆ ಮೈಸೂರು, ಚಾಮರಾಜನಗರ ಸೇರಿ ರಾಜ್ಯಾದ್ಯಂತ ಸಾಕಷ್ಟು ಆಕ್ರೋಶ ವ್ಯಕ್ತವಾಗಿತ್ತು. ಖುದ್ದು ಅರಣ್ಯ ಸಚಿವರು ಅಧಿಕಾರಿಗಳ ಸಭೆ ನಡೆಸಿ ಹುಲಿ ಸೆರೆಹಿಡಿಯಲು ಸೂಚನೆ ನೀಡಿದ್ದರು.

ಕೂಬಿಂಗ್ ಕಾರ್ಯಾಚರಣೆ ನಡೆಸಿದ ಸಿಬ್ಬಂದಿ ನರಹಂತಕ ಹುಲಿಯನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದರು. ಇದೀಗ ಇದೇ ತಾಲ್ಲೂಕಿನ ಮತ್ತೊಂದು ಕಡೆ ರೈತನ ಹತ್ಯೆಯಾಗಿದ್ದು, ಕಾಡಂಚಿನ ಗ್ರಾಮಸ್ಥರು ಭಯಭೀತರಾಗಿದ್ದಾರೆ.

**ಅಕ್ರಮ ರೆಸಾರ್ಟ್‌ಗಳ ಬಂದ್‌ಗೆ ಆಗ್ರಹ:** ಕಾಡಂಚಿನ ಗ್ರಾಮಸ್ಥರು ಸೇರಿ, ಪ್ರಜ್ಞಾವಂತ ವಲಯದಿಂದ ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ಅಕ್ರಮವಾಗಿ ನಿರ್ಮಾಣವಾಗಿರುವ ರೆಸಾರ್ಟ್‌ಗಳನ್ನು ಮುಚ್ಚಿಸಬೇಕು ಎನ್ನುವ ಕೂಗು ಜೋರಾಗಿದೆ. ಅಕ್ರಮ ರೆಸಾರ್ಟ್‌ಗಳ ನಿರ್ಮಾಣ ಮತ್ತು ಅವುಗಳ ಕಾರ್ಯಾಚರಣೆಯಿಂದಾಗಿ ಕಾಡು ಪ್ರಾಣಿಗಳ ಸಹಜ ಜೀವನಕ್ಕೆ ತೊಡಕು ಉಂಟಾಗುತ್ತಿದ್ದು, ನಾಡಿನತ್ತ ಮುಖ ಮಾಡುತ್ತಿವೆ.

ಇದರಿಂದಾಗಿ ಕಾಡಂಚಿನ ಗ್ರಾಮಸ್ಥರು ಭಯಗ್ರಸ್ಥರಾಗಿ ಜೀವನ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

# ಕ್ರಾಂತಿಯೋ? ಭ್ರಾಂತಿಯೋ?

## ನವೆಂಬರ್ ಅಂತ್ಯಕ್ಕೆ ಸಚಿವ ಸಂಪುಟ ವಿಸ್ತರಣೆಯ ಸುಳಿವು

**ಬೆಂಗಳೂರು:** ಕರ್ನಾಟಕ ರಾಜಕಾರಣದಲ್ಲಿ ಕ್ಷಿಪ್ರ ರಾಜಕೀಯ ಬೆಳವಣಿಗೆ ಸಂಭವಿಸುತ್ತಿದ್ದು ನವೆಂಬರ್ ಕ್ರಾಂತಿ ನಡೆಯಲಿದೆಯೇ ? ಅಥವಾ ಕೇವಲ ಭ್ರಾಂತಿಯೋ ಎಂಬ ಬಗ್ಗೆ ವ್ಯಾಪಕ ಚರ್ಚೆಗಳು ನಡೆಯುತ್ತಿದೆ. ಈನಡುವೆ, ಕಾಂಗ್ರೆಸ್ ಪಕ್ಷದಲ್ಲಿ ಅನೇಕ ಶಾಸಕರು ಮಾಧ್ಯಮಗಳ ಮುಂದೆ ವ್ಯತಿರಿಕ್ತ ಹೇಳಿಕೆಗಳನ್ನು ನೀಡುತ್ತಿರುವುದು ಪಕ್ಷದ ಹೈಕಮಾಂಡ್ ಅನ್ನು ಇಕ್ಕಟ್ಟಿಗೆ ಸಿಲುಕಿಸಿದೆ.





ಮೈಸೂರಿನಲ್ಲಿ ಮಾಜಿ ಸಚಿವ, ಹಿರಿಯ ಶಾಸಕ ತನ್ವೀರ್ ಸೇಠ್ ಅವರು ಮಾಧ್ಯಮಕ್ಕೆ ಪ್ರತಿಕ್ರಿಯೆ ನೀಡಿ, ಪಕ್ಷದೊಳಗೆ ಕ್ರಾಂತಿಯ ಬಗ್ಗೆ ಯಾವುದೇ ಚರ್ಚೆಗಳು ನಡೆದಿಲ್ಲ. ಬದಲಿಗೆ ಈ ತಿಂಗಳ ಅಂತ್ಯದೊಳಗೆ ಸಚಿವ ಸಂಪುಟ ಪುನರ್ ರಚನೆ ಆಗಬಹುದು ನಾನೂ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದೇನೆ. ನನಗೂ ಅವಕಾಶ ಸಿಗಬಹುದು ಎಂಬ ನಿರೀಕ್ಷೆ ಇದೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಸ್ಥಾನದ ಬಗ್ಗೆ ಮುಂದಿನ ನಾಯಕತ್ವದ ಬಗ್ಗೆ ಯಾಗಲಿ, ಮುಂದಿನ ನಾಯಕತ್ವದ ಬಗ್ಗೆ ಯಾರು ಏನೇ ಮಾತನಾಡಿದರೂ ಅದು ಅವರ ವೈಯಕ್ತಿಕ ಹೇಳಿಕೆ. ಯಾರೂ ಸಹ ನಾಯಕತ್ವ ಬದಲಾವಣೆ ಬಗ್ಗೆ ಮಾತನಾಡಬಾರದು ಎಂದು ಹೈಕಮಾಂಡ್ ಸ್ಪಷ್ಟವಾಗಿ ಹೇಳಿದೆ. ಕೆಲವರು ದಲಿತ ನಾಯಕತ್ವದ ಬಗ್ಗೆ ಮಾತನಾಡಿದ್ದಾರೆ. ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಮತ್ತೊಂದು ರೀತಿಯ ಹೇಳಿಕೆ ನೀಡಿದ್ದಾರೆ. ಇದೆಲ್ಲ ಅವರವರ ವೈಯಕ್ತಿ ಅನಿಸಿಕೆ ಎಂದು ಹೇಳಿದರು.

ಈ ನಡುವೆ, ಚಿತ್ರದುರ್ಗದಲ್ಲಿ ಮಾತನಾಡಿರುವ ಸಿಎಂ ಸಿದ್ದರಾಮಯ್ಯ ಅವರ ಆಪ್ತ ಸಚಿವ ಜಮೀರ್ ಅಹಮದ್, ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಗುಂಪುಗಾರಿಕೆ ಇಲ್ಲ. ಮೇಲಾಗಿ ಮುಖ್ಯಮಂತ್ರಿಗಳ ಕುರ್ಚಿಯೂ ಖಾಲಿ ಇಲ್ಲ. 2028ರವರೆಗೆ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ. ಆನಂತರ ಬೇಕಾದರೆ ಡಿ.ಕೆ.ಶಿವಕುಮಾರ್ ಸಿಎಂ ಆಗಲಿ ಎಂದು ಹೇಳಿಕೆ ನೀಡಿದ್ದಾರೆ.

**ದಲಿತ ಸಮಾವೇಶಕ್ಕೆ ಚಿಂತನೆ:** ಮತ್ತೊಂದು ಮೂಲಗಳ ಪ್ರಕಾರ, ಸಿಎಂ ಬದಲಾವಣೆ ಕೂಗು ಕೇಳಿ ಬರುತ್ತಿದ್ದಂತೆಯೇ ದಲಿತ ಮುಖ್ಯಮಂತ್ರಿ ಕೂಗು ಎದ್ದಿದೆ. ಇದಕ್ಕೆ ಪೂರಕವಾಗಿ ರಾಜ್ಯದಲ್ಲಿ ಎಲ್ಲ ದಲಿತ ಸಂಘಟನೆಗಳು ಒಗ್ಗೂಡಿ ದಲಿತ ಸಮಾವೇಶಕ್ಕೆ ಚಿಂತನೆ ನಡೆಸಿರುವುದೂ ಸಹ ಕಾಂಗ್ರೆಸ್‌ನಲ್ಲಿ ಚರ್ಚೆಗೆ ಗ್ರಾಸವಾಗಿದೆ. ರಾಜಕೀಯ ಕ್ಷಿಪ್ರ ಬೆಳವಣಿಗೆಯ ವೇಳೆ ದಲಿತರ ಪ್ರತ್ಯೇಕ ಕೂಗು ಸರಕಾರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ.

ಆದ್ದರಿಂದ ಸಮಾವೇಶದಂತಹ ಸಾಹಸಕ್ಕೆ ಮುಂದಾಗಬಾರದು ಎಂದು ಒಂದು ಬಣ ಹೈಕಮಾಂಡ್‌ಗೆ ಮನವರಿಕೆ ಮಾಡಿಕೊಟ್ಟಿದೆ ಎಂದು ತಿಳಿದುಬಂದಿದೆ.

### ಸಿಎಂ ಸಿದ್ದರಾಮಯ್ಯ ಸಿಡುಕು

ಈ ಸ್ವಪಕ್ಷ ನಾಯಕರ ಪ್ರತ್ಯೇಕ ಹೇಳಿಕೆಗಳು ಮತ್ತು ಮಾಧ್ಯಮಗಳಿಂದ ಸಿಎಂ ಬದಲಾವಣೆ ಸುದ್ದಿ ವೈಭವೀಕರಣದ ಬಗ್ಗೆ ಸಿಟ್ಟಿಗೆದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪತ್ರಕರ್ತರ ಪ್ರಶ್ನೆಯೊಂದಕ್ಕೆ ' ಯಾವ ಪತ್ರಿಕೆಯಲ್ಲಿ ಅದು ಬಂದಿದೆ. ನಾನು ಎಲ್ಲ ಪತ್ರಿಕೆಯನ್ನೂ ಓದುತ್ತೇನೆ. ನೀವು ಯಾವ ಪತ್ರಿಕೆ ನೋಡಿ ಹೇಳುತ್ತಿದ್ದೀಯ' ಎಂದು ಸಿಟ್ಟಿಗೆದ್ದು ನುಡಿದ ಪ್ರಸಂಗವೂ ಜರುಗಿದೆ.

### ದಲಿತ ಸಿಎಂ ಕೂಗು ಇದ್ದೇ ಇದೆ

ದಲಿತರು ಮುಖ್ಯಮಂತ್ರಿ ಆಗಬೇಕೆಂಬ ಕೂಗು ಇದ್ದೇ ಇದೆ. ಡಾ. ಅಂಬೇಡ್ಕರ್ ಅವರೂ ಸಹ ದಲಿತರಿಗೆ ರಾಜಕೀಯ ಅಧಿಕಾರ ದೊರಕಬೇಕೆಂಬ ಆಶಯ ಹೊಂದಿದ್ದರು. ಈ ದಿಸೆಯಲ್ಲಿ ನಮ್ಮ ಒತ್ತಾಯ ಇದ್ದೇ ಇರುತ್ತದೆ. ಕಾಂಗ್ರೆಸ್ ಪಕ್ಷವೇನೂ ದಲಿತರನ್ನು ಮುಖ್ಯಮಂತ್ರಿ ಮಾಡಲ್ಲ ಎಂದು ಹೇಳಿಲ್ಲ. ಎಲ್ಲವೂ ಈಗಲೇ ಆಗಬೇಕು ಎಂದರ್ಥವಲ್ಲ. ಯಾವ ಕಾಲದಲ್ಲಿ ಹೈಕಮಾಂಡ್ ಯಾವ ನಿರ್ಧಾರ ಕೈಗೊಳ್ಳುತ್ತದೆ ಕಾದು ನೋಡಬೇಕು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಗಳಿಗೆ ನವೆಂಬರ್ 21 ಡೆಡ್‌ಲೈನ್ ಕೊಟ್ಟಿದ್ದಾರಲ್ಲ ಎಂಬ ಮಾಧ್ಯಮದ ಪ್ರಶ್ನೆಗೆ 'ನನಗೇನು ಗೊತ್ತಪ್ಪ, ಇದೆಲ್ಲ ಸಿಎಂ, ಅಧ್ಯಕ್ಷರು, ಹೈಕಮಾಂಡ್ ಬಿಟ್ಟವಿಚಾರ' ಎಂದು ಪ್ರತಿಕ್ರಿಯಿಸಿದ್ದಾರೆ.

## ಸಂಪಾದಕೀಯ

### ಗಾಂಧಿ ಯುಗದ ಪತ್ರಿಕೋದ್ಯಮದಿಂದ ಗಾಂಧಿ ನೋಟಿನ ಪತ್ರಿಕೋದ್ಯಮದೆಡೆಗೆ...



ಕಾಲಮಾನ...

'ಪತ್ರಿಕೋದ್ಯಮದ ಮುಖ್ಯ ಧ್ಯೇಯ ಸಮಾಜ ಸೇವೆ...' ಎಂದು ಹೇಳಿದ್ದ ಮಹಾತ್ಮ ಗಾಂಧಿಜಿಯೂ ಈಗ ನೆನಪು ಮಾತ್ರ ಮತ್ತು ಅವರ ಮಾತುಗಳು ಬರಿಯ ಮಾತಾಗಿ ಉಳಿದಿದೆ. ಕಾರಣ, ಭಾರತದ ಪತ್ರಿಕೋದ್ಯಮ ಗಾಂಧಿ ಯುಗದ ಪತ್ರಿಕೋದ್ಯಮದಿಂದ ಗಾಂಧಿ ನೋಟಿನ ಪತ್ರಿಕೋದ್ಯಮದ ಕಡೆಗೆ ಕೈಚಾಚಿ ನಿಂತು ಬಹಳ ಕಾಲವೇ ಆಗಿದೆ. ಆದ್ದರಿಂದಲೇ ಪತ್ರಕರ್ತರೂ ಆಗಿದ್ದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ' ಅಂದು ಭಾರತದ ಪತ್ರಿಕೋದ್ಯಮ ವೃತ್ತಿಯಾಗಿತ್ತು, ಇಂದು ವ್ಯಾಪಾರವಾಗಿದೆ' ಎಂದು 65 ವರ್ಷಗಳ ಹಿಂದೆಯೆ ಹೇಳಿದ್ದರು. ಭಾರತದ ಮೊದಲ ಪತ್ರಿಕೆ ಬೆಂಗಾಲ್ ಗೆಜೆಟ್‌ನ ಸಂಪಾದಕ ಜಾನ್ ಅಗಸ್ಟಸ್ ಹಿಕ್ಕಿ ತಮ್ಮ ಮೊದಲ ಸಂಪಾದಕತ್ವದಲ್ಲಿ ' ದೇಹವನ್ನು ಗುಲಾಮಗಿರಿ ಇಟ್ಟು, ಮನಸ್ಸಿಗೆ ಸ್ವಾತಂತ್ರ ತಂದುಕೊಳ್ಳಲು ಪತ್ರಿಕೆ ಆರಂಭಿಸಿದ್ದೇನೆ' ಎಂದು ಬರೆದುಕೊಂಡಿದ್ದರು. ಆದರೆ ಇಂದು ! ?

ಕಾಲವೊಂದಿತ್ತು...! ಪತ್ರಕರ್ತನೆಂದರೆ ಜನರಲ್ಲಿ ಒಂದಿಷ್ಟು ಸ್ಪಷ್ಟ ಕಲ್ಪನೆಯಿತ್ತು, ವೃತ್ತಿ ಪರತೆಗೆ ಒಂದು ಸಿದ್ಧ ಮಾದರಿಯಿತ್ತು. ಈಗ ಕಾಲ ಬದಲಾಗಿದೆ...! ಆಧುನಿಕತೆಯ ಅಬ್ಬರದಿಂದಾಗಿ ಮೊಬೈಲ್ ಹೊಂದಿರುವ ಪ್ರತಿಯೊಬ್ಬ ಮನುಷ್ಯನೂ ಪತ್ರಕರ್ತನಾಗಿದ್ದಾನೆ. ಪತ್ರಕರ್ತರಂತೆ ಬರೆಯುತ್ತಿದ್ದಾನೆ, ತೋರಿಸುತ್ತಿದ್ದಾನೆ, ಹೇಳುತ್ತಿದ್ದಾನೆ, ಪ್ರಕಟಿಸುತ್ತಿದ್ದಾನೆ, ಪ್ರಚಾರ ಮಾಡುತ್ತಿದ್ದಾನೆ. ಇಂತಃ ವಿಚಿತ್ರ ಸನ್ನಿವೇಶದಲ್ಲಿ ನೈಜ ಪತ್ರಿಕೋದ್ಯಮ ಮತ್ತು ನೈಜ ಪತ್ರಕರ್ತರ ಅಸ್ಮಿತೆಗೆ ಬಹುದೊಡ್ಡ ಧಕ್ಕೆ ಬಂದಿರುವುದಂತೂ ಸತ್ಯ. ಇದಕ್ಕೆ ಸಾಕ್ಷಿ, ಸಾಮಾಜಿಕ ಮಾಧ್ಯಮವು ಸಹಜ ಮಾಧ್ಯಮವನ್ನೇ ಹಿಮ್ಮೆಟ್ಟಿಸುವ ಮಟ್ಟಕ್ಕೆ ವೇಗ ಪಡೆದುಕೊಂಡಿದ್ದು ಸುದ್ದಿಗಳು ವೈರಲ್ ಆಗುವ ಬದಲು ವೈರಲ್ ಆಗುವ ವಿಷಯಗಳು ಸುದ್ದಿಯಾಗುತ್ತಿರುವುದು ವಿಪರ್ಯಾಸ.

ಇದರ ಜತೆಗೆ ಅಂದು ಓದುಗರಿಗಾಗಿ ಪತ್ರಿಕೋದ್ಯಮ ಮಾಡಲಾಗುತ್ತಿತ್ತು. ಇಂದು ಮಾಲೀಕರಿಗಾಗಿ ಪತ್ರಿಕೋದ್ಯಮ ಮಾಡಲಾಗುತ್ತಿದೆ. ನಕಲಿ ಸುದ್ದಿ, ನಕಲಿ ಚರ್ಚೆ, ನಕಲಿ ಸಂವಾದಗಳಿಂದ ನಕಲಿ ರಾಜಕೀಯ ವ್ಯವಸ್ಥೆಯೊಂದು ನಿರ್ಮಾಣವಾಗಿದ್ದು, ಸರಕಾರಗಳನ್ನು ಪ್ರಶ್ನಿಸುವ ಮಾಧ್ಯಮ ಕಣ್ಮರೆಯಾಗಿದೆ. ಮಾಧ್ಯಮ ಸಂಸ್ಥೆಗಳು ಆಳುವವರೊಂದಿಗೆ ಒಳ ಒಪ್ಪಂದ ಮಾಡಿಕೊಂಡು ತಮ್ಮ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ನಿರ್ಮಾಣಗೊಂಡಿದೆ. ಪತ್ರಕರ್ತನಿಗೆ ಸುದ್ದಿ ಕೇಳುವ ಬದಲು ಈ ತಿಂಗಳ ನೀವು ಸಂಸ್ಥೆಗೆ ತಂದುಕೊಟ್ಟ ವರಮಾನವೆಷ್ಟು ಎಂದು ಕೇಳಲಾಗುತ್ತಿದೆ. ಹಾಗಾಗಿ ಯಶಸ್ವಿ ಪತ್ರಕರ್ತರಾಗಿ ಉಳಿಯಬೇಕಾದಲ್ಲಿ ನಿಮ್ಮೊಳಗೆ ಒಬ್ಬ ವ್ಯಾಪಾರಿ, ಉದ್ಯಮಿ ಇರಲೇ ಬೇಕಾ ? ಎಂಬ ಜಿಜ್ಞಾಸೆ ಮೂಡಿದೆ.

ಇನ್ನು ಭಾರತದಂತಃ ಜಾತಿ ವ್ಯವಸ್ಥೆಯೊಳಗೆ ಸುದ್ದಿ ತಾರತಮ್ಯ ಇಂದಿಗೂ ಜೀವಂತವಾಗಿದೆ. ಅಂದು ಡಾ. ಬಿ.ಆರ್. ಅಂಬೇಡ್ಕರ್ ಅವರ ಲೇಖನಗಳನ್ನು ಪ್ರಕಟಿಸಲು ನಿರಾಕರಿಸಿದ ಕೇಸರಿ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಶ್ರೀ ಬಾಲ ಗಂಗಾಧರ ತಿಲಕರ ಸಂತತಿ ಇಂದಿಗೂ ತಿಲಕವಿಟ್ಟು ಮಾಧ್ಯಮ ಲೋಕವನ್ನು ನಿಯಂತ್ರಿಸುತ್ತಿದ್ದು, ಶೋಷಿತ, ಧ್ವನಿ ರಹಿತ, ಅಸ್ಪೃಶ್ಯ, ಹಿಂದುಳಿದ ಸಮಾಜಗಳ ಪರವಾದ ಪತ್ರಿಕೆಗಳು ಮತ್ತು ದೃಶ್ಯ ಮಾಧ್ಯಮಗಳು ಎಲ್ಲಿದೆ ಎಂದು ಹುಡುಕಬೇಕಾಗಿದೆ. ಈನಡುವೆ, ಸುಳ್ಳು ಸುದ್ದಿಗಳ ಯುಗವೂ ಆರಂಭಗೊಂಡಿದ್ದು ಓದುಗರು ಮಾಹಿತಿ ಹುಡುಕುವುದಕ್ಕಿಂತ್ತಲೂ ಪತ್ರಿಕೆ ಮತ್ತು ಮಾಧ್ಯಮದೊಳಗೆ ಸತ್ಯ ಹುಡುಕಬೇಕಾದ ಸೋಚನೀಯ ಸ್ಥಿತಿ ನಿರ್ಮಾಣಗೊಂಡಿದೆ.

ಇಂತಹ ವಿಷಮ ಕಾಲಘಟ್ಟದಲ್ಲಿ ವಿಜಯಕಾಲ ದಿನಪತ್ರಿಕೆಯನ್ನು ವಾಸ್ತವದ ಅರಿವಿಟ್ಟುಕೊಂಡೇ ಆರಂಭಿಸಿದ್ದೇನೆ. ತುಮಕೂರು ಮೂಲದ ವಿಜಯಕಾಲ ದಿನಪತ್ರಿಕೆಯನ್ನು ಸಹೋದರ ಪಿ.ಎನ್. ನೃಪತುಂಗ ಅವರಿಂದ ಪಡೆದು ಮೈಸೂರಿನಿಂದ ಪ್ರಕಟ ಮಾಡಲು ಸರ್ವವಿಧದಲ್ಲೂ ಸಜ್ಜಾಗಿದ್ದೇವೆ. ಆಧುನಿಕ ಪ್ರಪಂಚಕ್ಕೆ ಹೊಂದಿಕೊಳ್ಳುವ ದೃಷ್ಟಿಯಿಂದ ವೈವಿಧ್ಯತೆಗಳು ಒಳಗೊಂಡ ವೆಬ್‌ಸೈಟ್ ಮತ್ತು ಡಿಜಿಟಲ್ ಮಾಧ್ಯಮವನ್ನೂ ಏಕಕಾಲಕ್ಕೆ ಆರಂಭಿಸಿದ್ದೇವೆ. 28 ವರ್ಷಗಳ ಮಾಧ್ಯಮ ವೃತ್ತಿಯ ಪಯಣದಲ್ಲಿ 15ಕ್ಕೂ ಹೆಚ್ಚು ಮಾಧ್ಯಮ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವವಿದೆ. ಮುದ್ರಣ, ವಿದ್ಯುನ್ಮಾನ, ಸಾಮಾಜಿಕ ಮಾಧ್ಯಮ ಕ್ಷೇತ್ರದಲ್ಲಿ ಸಮಾನ ಜ್ಞಾನ ಹೊಂದಿದ್ದೇನೆ. ಇದೆಲ್ಲದಕ್ಕಿಂತ್ತ ಮಿಗಿಲಾಗಿ ಒಳ್ಳೆಯ ಪತ್ರಿಕೋದ್ಯಮ ಮತ್ತು ಕೆಟ್ಟ ಪತ್ರಿಕೋದ್ಯಮದ ನಡುವಿನ ವ್ಯತ್ಯಾಸದ ಅರಿವು ನನಗಿದೆ. ನಾವು ಸಂಗ್ರಹಿಸುವ ಮಾಹಿತಿಗೆ ಮೌಲ್ಯವನ್ನು ತುಂಬಿ ಓದುಗರಿಗೆ ಅರ್ಪಿಸುವುದೇ ಒಳ್ಳೆಯ ಪತ್ರಿಕೋದ್ಯಮ ಎಂಬ ಪ್ರಜ್ಞೆ ನಮಗಿದೆ. 'ಕೆಟ್ಟ ಪತ್ರಿಕೋದ್ಯಮ ಮಾಡೋದು ಅಗ್ಗದ ಕೆಲಸ– ಒಳ್ಳೆಯ ಪತ್ರಿಕೋದ್ಯಮ ಮಾಡೋದು ದುಬಾರಿ ಕೆಲಸ' ಎಂಬ ಸತ್ಯದ ಅರಿವು ನಮಗಿದೆ.

**ನನ್ನ ಆತ್ಮೀಯ ಓದುಗರೇ,**

'ನಮ್ಮ ಅಭಿವ್ಯಕ್ತಿ–ನಮ್ಮ ಶಕ್ತಿ' ಎಂಬ ಧ್ಯೇಯದೊಂದಿಗೆ ಮಾಧ್ಯಮ ಲೋಕಕ್ಕೆ ವಿಜಯಕಾಲ ದಿನಪತ್ರಿಕೆಯ ಸೇರ್ಪಡೆಗೊಂಡಿದೆ. ಇಲ್ಲಿ ನಿಮಗೆ ಸುದ್ದಿ ಮಾತ್ರವಲ್ಲ ಸಂವೇದನೆ ಮತ್ತು ಸಂವಾದಕ್ಕೂ ಅವಕಾಶವಿದೆ. ಮಾನವ ಹಕ್ಕು ಮತ್ತು ಮಾನವೀಯ ಮೌಲ್ಯಗಳ ಪ್ರತಿಬಿಂಬವಾಗಲಿದೆ. ಓದುಗರ ಒಡಲಾಳದ ವೇದನೆಗೆ ವೇದಿಕೆಯಾಗಲಿದೆ. ಮಾಧ್ಯಮ ಎನ್ನುವುದು ಅರಿವು ಎಂಬ ಪ್ರಜ್ಞೆಯೊಂದಿಗೆ ಶಿಕ್ಷಣ, ಸಂಘಟನೆ, ಹೋರಾಟಕ್ಕೆ ದಾರಿಯಾಗಲಿದೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಆಶಯಗಳಿಗೆ ಆಸರೆಯಾಗಲಿದೆ. ಪ್ರಶ್ನಿಸುವುದು, ಮಾತನಾಡುವುದು, ಬರೆಯುವುದು ಪ್ರತಿಯೊಬ್ಬರ ಮೂಲಭೂತ ಹಕ್ಕು. ಮಹಾಪಾಪಿಗಳಿಗಿಂತ್ತಲೂ ಮೌನಿಗಳು ಈ ಸಮಾಜಕ್ಕೆ ಬಹುದೊಡ್ಡ ಅಪಾಯ. ಒಬ್ಬ ಒಳ್ಳೆಯ ಪತ್ರಕರ್ತ ಏನನ್ನು ಹೇಳಬಹುದೋ, ಏನನ್ನು ಬರೆಯಬಹುದೋ, ಏನನ್ನೂ ತೋರಿಸಬಹುದೋ ಅಷ್ಟನ್ನೇ ನಾವು ಮಾಡುತ್ತೇವೆ. ಪ್ರತಿಯೊಬ್ಬರೂ ಅಜ್ಞಾನದಿಂದ ಜ್ಞಾನದ ಕಡೆಗೆ ಮುಖ ಮಾಡಬೇಕೆನ್ನುವುದೇ ನಮ್ಮ ಹಂಬಲ, ಆಮೂಲ ಎಲ್ಲರ ಬದುಕಿನಲ್ಲಿ ಬರಲಿ ಶಾಶ್ವತ ವಿಜಯಕಾಲ. 'ಜೀವನ ಸುದೀರ್ಘವಾಗಿರುವುದಕ್ಕಿಂತ್ತಲೂ ಶ್ರೇಷ್ಠವಾಗಿರಬೇಕೆಂಬ' ಮಹಾನ್ ಮಾನವತವಾದಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಮಾತುಗಳೊಂದಿಗೆ ಈ ದಿನದ 'ಕಾಮಮಾನ'ಕ್ಕೆ ವಿರಾಮ ಹೇಳುತ್ತೇನೆ.

**ನಿಮ್ಮ ಸಹಕಾರ, ಬೆಂಬಲ ನಮಗಿರಲಿ**

ಪ್ರೀತಿಯಿಂದ
**ಕೆ.ದೀಪಕ್,** ಪ್ರಧಾನ ಸಂಪಾದಕ

## ರೇಣುಕಾಸ್ವಾಮಿ ಕೊಲೆ ಪ್ರಕರಣ

# ದರ್ಶನ್‌ಗೆ ದೋಷಾರೋಪ ನಿಗದಿ ಮುಂದೂಡಿಕೆ



ಬೆಂಗಳೂರು:– ರೇಣುಕಾಸ್ವಾಮಿ ಕೊಲೆ ಪ್ರಕರಣದ ಎಲ್ಲ ಆರೋಪಿಗಳ ಮೇಲೆ ದೋಷಾರೋಪ ನಿಗದಿಯನ್ನು ನ್ಯಾಯಾಲಯವು ನವೆಂಬರ್ 3ಕ್ಕೆ ಮುಂದೂಡಿದೆ.

ಎರಡನೇ ಆರೋಪಿ ನಟ ದರ್ಶನ್ ಹಾಗೂ ಇತರೆ ಆರೋಪಿಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಿದ್ದು ಆದರೆ ಕೆಲವೇ ನಿಮಿಷಕ್ಕೆ ವಿಚಾರಣೆ ಮುಗಿದು ದೋಷಾರೋಪ ನಿಗದಿಯನ್ನು ಮುಂದೂಡಲಾಗಿದೆ. ಅಲ್ಲದೆ ದೋಷಾರೋಪ ನಿಗದಿ ಮಾಡುವ ದಿನದಂದು ಕಡ್ಡಾಯವಾಗಿ ಎಲ್ಲ ಆರೋಪಿಗಳು ಹಾಜರಿರಬೇಕು ಎಂದು ನ್ಯಾಯಾಧೀಶರು ಹೇಳಿದ್ದಾರೆ.

ರೇಣುಕಾ ಸ್ವಾಮಿ ಕೊಲೆಯಾದ ಸುಮಾರು ಒಂದೂವರೆ ವರ್ಷದ ಬಳಿಕ ಇದೀಗ ದೋಷಾರೋಪ ನಿಗದಿ ಆಗಲಿದೆ. ನವೆಂಬರ್ 3 ರಂದು ದರ್ಶನ್ ಹಾಗೂ ಇತರೆ ಆರೋಪಿಗಳ ಮೇಲೆ ಪೊಲೀಸರು ಹೇರಿರುವ ಆರೋಪಗಳನ್ನು ಆರೋಪಿಗಳಿಗೆ ಓದಿ ಹೇಳಲಾಗುತ್ತದೆ. ಒಂದು ವೇಳೆ ಆರೋಪಿಗಳು ತಮ್ಮ ಮೇಲಿರುವ ಆರೋಪಗಳನ್ನು ಒಪ್ಪಿಕೊಂಡರೆ ಶಿಕ್ಷೆ ಪ್ರಕಟವಾಗಲಿದೆ.

ಒಂದೊಮ್ಮೆ ಆರೋಪಿಗಳು ಆರೋಪಗಳನ್ನು ನಿರಾಕರಿಸಿದರೆ ಸಾಕ್ಷ್ಯಗಳ ವಿಚಾರಣೆ ನಡೆಯಲಿದೆ. ಸಾಕ್ಷ್ಯಗಳ ವಿಚಾರಣೆಗೆ ದಿನಾಂಕವನ್ನು ನಿಗದಿ ಪಡಿಸಲಾಗುತ್ತದೆ. ಈ ಪ್ರಕರಣದಲ್ಲಿ ಸಾಕಷ್ಟು ಸಂಖ್ಯೆಯ ಸಾಕ್ಷ್ಯಗಳು ಇರುವ ಕಾರಣ ಸಹಜವಾಗಿಯೇ ಎಲ್ಲರ ವಿಚಾರಣೆ, ಮರು ವಿಚಾರಣೆಗಳಿಗೆ ಸುಮಾರು ಒಂದಿರಂದ ಎರಡು ವರ್ಷ ಸಮಯ ಹಿಡಿಯುವ ಸಾಧ್ಯತೆ ಇದೆ.

ನವೆಂಬರ್ 3 ರಂದು ದರ್ಶನ್ ಹಾಗೂ ಇತರೆ ಆರೋಪಿಗಳ ಪಾಲಿಗೆ ಅತ್ಯಂತ ಮಹತ್ವದ ದಿನ ಆಗಿರಲಿದೆ. ಅಂದು ನಿಗದಿ ಆಗುವ ಆರೋಪಗಳ ಮೇಲೆಯೇ ಮುಂದಿನ ವಿಚಾರಣೆ ನಡೆಯಲಿದೆ. ಪೊಲೀಸರು ಅಥವಾ ತನಿಖಾಧಿಕಾರಿಗಳು ಈ ದೋಷಾರೋಪವನ್ನು ನಿಗದಿ ಮಾಡಲಿದ್ದಾರೆ. ದರ್ಶನ್ ವಿರುದ್ಧ ಯಾವ ಯಾವ ಆರೋಪಗಳನ್ನು ಹೊರಿಸಲಿದ್ದಾರೆ ಎಂಬುದು ಕುತೂಹಲಕಾರಿ ವಿಷಯವಾಗಿದೆ.

ಈಗ ಜೈಲಿನಲ್ಲಿರುವ ಏಳು ಜನರು ಮಾತ್ರವೇ ಅಲ್ಲದೆ ಪ್ರಕರಣದ ಎಲ್ಲ ಆರೋಪಿಗಳ ಮೇಲೂ ದೋಷಾರೋಪದ ನಿಗದಿ ಆಗಲಿದೆ. ಇವರಲ್ಲಿ ಕೆಲವರ ಹೆಸರನ್ನು ಕೈಬಿಡುವ ಸಾಧ್ಯತೆಯೂ ಸಹ ಇದೆ.

ದರ್ಶನ್ ಪರ ವಕೀಲರು ಈ ಹಿಂದೆಯೇ ವಿಚಾರಣೆ ವೇಳೆ ಶೀಘ್ರವಾಗಿ ದೋಷಾರೋಪ ನಿಗದಿ ಮಾಡಿ ಸಾಕ್ಷ್ಯಗಳ ವಿಚಾರಣೆ ಆರಂಭ ಮಾಡುವಂತೆ ಒತ್ತಾಯ ಮಾಡಿದ್ದರು. ಆದರೆ ಸರ್ಕಾರಿ ವಕೀಲರು ದೋಷಾರೋಪ ನಿಗದಿಗೆ ಸಮಯ ಕೇಳಿದ್ದರು. ದರ್ಶನ್ ಪರ ವಕೀಲರು, ತಾವು ವಿಚಾರಣೆ ಎದುರಿಸಿಯೇ ನ್ಯಾಯಾಲಯದಿಂದ ಹೊರಬರುವುದಾಗಿ ಹೇಳಿದ್ದರು. ಅಲ್ಲದೆ, ನ್ಯಾಯಾಧೀಶರು ಸಹ, ಎರಡೂ ಕಡೆಯವರು ಸಾಕ್ಷ್ಯಗಳ ವಿಚಾರಣೆಗೆ ಸಹಕರಿಸಬೇಕು ಎಂದು ಮನವಿಯನ್ನು ಮಾಡಿದ್ದರು.